VIJAYAKUMAR KANNUR
Digitally signed by VIJAYAKUMAR KANNUR
Date: 2026.01.13 10:34:05 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 12.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಕೆ ವಿ ಕೆ ವಕೀಲರಿಂದ**

1. ಸೇಲ್ಪ ಅಟೆಸ್ಟೆಡನ ಆಧಾರ ಗುರುತಿನ ಚೀಟಿಯನ್ನು ನಿಡಿ **1** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಕು. ಎಸ್ ಎಸ್ ಡಿ ವಕೀಲರಿಂದ :**

ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಿಡಿ 1 ರ ದಾಖಲೆಯನ್ನು ನಮ್ಮ ವಕೀಲರು ಹಾಜರು ಪಡಿಸುವಂತೆ ಹೇಳಿರುವುದರಿಂದ ಆ ಕಾರಣಕ್ಕೆ ಹಾಜರು ಪಡಿಸಿರುವೆನು.ನಾನು ಮಧೋಳ ಪಟ್ಟಣದ ಸೈದಾಪೂರ ಗಲ್ಲಿಯಲ್ಲಿ ವಾಸವಾಗಿರುವೆನು. ಸ್ವಂತ ಮನೆ ಬಿದ್ದಿರುವುದು, ಬಾಡಿಗೆ ಮನೆಯಲ್ಲಿ ವಾಸವಾಗಿರುವೆನು. ಆ ಮನೆ ಬಿದ್ದ ಬಗ್ಗೆ ಮತ್ತು ಮಾಲೀಕತ್ವದ ಹಕ್ಕಿನ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಕಳೆದ 18 ವರ್ಷಗಳಿಂದ ಸೈದಾಪೂರ ಗಲ್ಲಿಯಲ್ಲಿ ವಾಸವಾಗಿರುವೆನು. ನಾನು ವಾಸವಾಗಿದ್ದ ಮನೆಯ ಮಾಲೀಕರ ಜೊತೆ ಮನೆಯ ಬಾಡಿಗೆಗೆ ಸಂಬಂಧಪಟ್ಟಂತೆ ಯಾವುದೇ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ನಾನು ಮುಧೋಳ ಪಟ್ಟಣದ ಮಲ್ಲಮ್ಮ ನಗರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ.

2. ದಿಃ 07.03.2025 ರಂದು ದೂರುದಾರ ನನಗೆ ವಕೀಲರ ಮೂಲಕ ನೋಟಿಸು ಕಳುಹಿಸಿಕೊಟ್ಟಿದ್ದನು ಎಂದರೆ ಸರಿಯಲ್ಲ. ಆ ನೋಟಿಸನ್ನು ನಿಪಿ 5 ರಂತೆ ಅಂಚೆ ಸ್ವೀಕೃತ ಪತ್ರದ ಮೇಲೆ ಸಹಿ ಮಾಡಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಂಡೆ ಸಾಮಾನುಗಳನ್ನು ಮಾರಾಟ ಮಾಡಲು ಊರು ಬಿಟ್ಟು ಹೋಗಿರುವುದರಿಂದ ಆ ನೋಟಿಸು ನನಗೆ ಬಂದ ಬಗ್ಗೆ ಮಾಹಿತಿ ಇರುವುದಿಲ್ಲ. ನಿಪಿ 5 ರ ದಾಖಲೆಯ ಮೇಲಿನ ಸ್ವೀಕೃತದಾರರ

ಸಹಿಯನ್ನು ತೋರಿಸಲಾಗಿ ಅದು ಅದನ್ನೇ ಇರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ನಿಪಿ 3 ರ ನೋಟಿಸು ನಾನು ಸ್ವೀಕರಿಸಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನೋಟಿಸಿಗೆ ನಾನು ಉತ್ತರವನ್ನು ನೀಡಿರುವುದಿಲ್ಲ. ಸಾಕ್ಷಿಯ ವಕಾಲತ ಮೇಲಿನ ಸಹಿಯನ್ನು ತೋರಿಸಲಾಗಿ ತನ್ನದೇ ಇರುವುದು ಎಂದು ಒಪ್ಪಿಕೊಂಡಿರುವಳು. ನಿಪಿ1 ಎ ಸಹಿ ತನ್ನದೇ ಇರುವುದಾಗಿ ಎಂದು ಒಪ್ಪಿಕೊಂಡಿರುವರು.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ